ಸ್ವಲ್ಪ ಹೊತ್ತು ಮೊಬೈಲ್ ತಡಕಾಡಿ ನಂಬರ್ ಒಂದನ್ನು ತೋರಿದ. ಕರೆ ಮಾಡಿದಾಗ ಅತ್ತಲಿಂದ ಉಸ್ಮಾನ್ ಕರೆ ಸ್ವೀಕರಿಸಿದ.

'ಉಸ್ಮಾನ್, ನಾನು ಇನ್‌ಸ್ಪೆಕ್ಟ್ರು ಮಾತಾಡ್ತಾ ಇದ್ದೀನಿ... ಎಲ್ಲಿದ್ದೀಯಾ?...'

'ಟ್ರಿಪ್‌ನಲ್ಲಿದ್ದೀನಿ... ಹೊಸೂರು ಹತ್ರ... ಯಾಕ್ ಸಾರ್...'

'ಅದೇ ಮೊನ್ನೆ ಆ ಹೆಣ್ ಕೂಸಿಂದು... ಸ್ಟೇಷನ್ನಿಗೆ ಕರ್ಕೊಂಡ್ ಬಂದು ಭಾಳಾ ಒಳ್ಳೆ ಕೆಲಸ ಮಾಡಿದ್ದೀಯ ನೋಡು, ವೆರಿಗುಡ್... ಮಗಾ ಅವರಪ್ಪನ ಕೈ ಸೇರಿದ್ದು ನಿನ್ನಿಂದ್ಲೇ ಕಣಯ್ಯಾ. ಒಂದ್ಸಾರಿ ಸ್ಟೇಷನ್ನಿಗೆ ಬಂದ್ ಹೋಗು, ಸ್ವಲ್ಪ ಡೀಟೈಲ್ಸು ಬೇಕಾಗಿದೆ... ಒಳ್ಳೆ ಕೆಲ್ಸ ಮಾಡಿರೋ ನಿನ್ನಂತೋರಿಗೆ ಒಂದ್ ಟೀನಾದ್ರೂ ಕುಡಿಸದಿದ್ದರೆ ಹೆಂಗಯ್ಯಾ?...' ಅಂದೆ. ನನ್ನ ಪುಸಲಾಯಿಸುವಿಕೆ ಫಲ ನೀಡಿತು.

'ಟ್ರಿಪ್ ಮುಗಿಸಿ ಬರ್ಬೇಕು ಸಾರ್... ಎಂಟೂವರೆ ಒಂಬತ್ತಾಯ್ತದೆ...'

'ಪರ್ವಾಗಿಲ್ಲ ಹೆಚ್ಚು ಕಮ್ಮೀನೇ ಬಾ... ನಮ್ಗೂ ಹೊತ್ತುಗೊತ್ತು ಇರಂಗಿಲ್ಲ. ಕಾಯ್ತಾ ಇರ್ತೀನಿ...' ಅಂದೆ.

ಹೇಳಿದಂತೆ ಒಂಬತ್ತೂವರೆ ಸುಮಾರಿಗೆ ಬಂದ. ಎದುರಿಗೆ ಕೂಡಿಸಿ ಟೀ ತರಿಸಿದೆ. 'ಆ ದಿನ ಮಗೀನ ಸುದ್ದಿ ಹೆಂಗೆ ಗೊತ್ತಾಯ್ತು... ನೀನು ಟ್ರಿಪ್ ಮೇಲಿದ್ದೆ ಅಲ್ವಾ?...' ನೇರವಾಗಿ ವಿಷಯಕ್ಕೆ ಬಂದೆ.

'ಹೌದು ಸಾರ್... ಊಟಕ್ಕೆ ನಿಲ್ಸಿದ್ದೋನು ಹಂಗೇ ಹೊಸೂರು ರಸ್ತೆ ಸ್ಟ್ಯಾಂಡ್ ಪಕ್ಕದಾಗಿರೋ ಮೈದಾನದ ಪಕ್ಕ ನೆರಳಿನಾಗೆ ಬಸ್ ಹಾಕ್ಕೊಂಡು ರೆಸ್ಟು ತಗಾತಿದ್ದೆ. ಮಗಾನ ದರ್ಗಾದಾಗೆ ಬಿಟ್ಟುಹೋಗೌರೆ ಅಂತ ಯಾರೋ ಮಾತಾಡ್ಕತಾ ಇದ್ರು. ಬೆಳಗ್ಗೆ ಮಾರ್ಕೆಟ್‌ನಾಗೆ ಕಾಣೆಯಾದ ಮಗೀನ ಪಾಂಪ್ಲೆಟ್ಟು ನೋಡಿದ್ನಾ? ಸುಮ್ನೆ ಕುತೂಹಲಕ್ಕೆ ಅಡ್ಡಾಡಿಕೊಂಡು ಹೋಗಿ ನೋಡಿದ್ರೆ ಅದೇ ಮಗಾ! ದರ್ಗಾದಾಗಿರೋ ಬಾಬಾ ಹತ್ರ ಹಿಂಗಿಂಗೆ ಅಂತ ಹೇಳಿ ಸೀದಾ ಎತ್ಕೊಂಡ್ ಹೋಗಿ ಪೊಲೀಸ್ ಸ್ಟೇಷನ್‌ಗೆ ಬುಟ್ಟೆ. ಮತ್ತೆ ಮಾರ್ಕೆಟ್ಟಿಗೆ ಬಂದೋನು ಪಾಂಪ್ಲೆಟ್ಟು ಹುಡುಕಿ ಅದ್ರಲ್ಲಿರೋ ನಂಬರಿಗೆ ಫೋನ್ ಮಾಡಿ ಮಗಾ ಠಾಣೇಗೈತೆ ಹೋಗಿ ನೋಡ್ಕಳಿ ಅಂತ್ಹೇಳಿ ಒಂಟೋದೆ. ಇಷ್ಟೇ ಸಾರ್ ಆಗಿದ್ದು...' ಅಂದ.

ಯಾಕೋ ಅವನ ಹೇಳಿಕೆ ಸತ್ಯ ಅನಿಸಲಿಲ್ಲ. ಕೆಲವು ಸಾರಿ ಹೇಳಿಕೆಯಲ್ಲಿ ಏನಿರುತ್ತೆ ಅನ್ನುವುದಕ್ಕಿಂತಲೂ ಹೇಳೋನ ಕಾನ್ಫಿಡೆನ್ಸು ಹೇಗಿರುತ್ತೆ ಅನ್ನೋದು ಮುಖ್ಯವಾಗುತ್ತೆ.

ಪ್ರೊಬೇಷನರಿಯನ್ನು ಉಸ್ಮಾನನ ಜೊತೆ ಕಳಿಸಿ ಅವನು ಹೇಳಿದ್ದರ ಸತ್ಯಾಸತ್ಯತೆ ಪರಿಶೀಲಿಸಿಕೊಂಡು ಬರಲು ಹೇಳಿದೆ. ವಾಪಸು ಬಂದವನು 'ಬೋಳೀಮಗ ಸುಳ್ಳು ಬೊಗಳ್ತಾವ್ನೆ ಸಾರ್... ಕರಪತ್ರವೂ ಇಲ್ಲ, ಮಣ್ಣಾಗಟ್ಟಿಯೂ ಇಲ್ಲ... ಮಗಾ ಸಿಕ್ಕಿದ ದರ್ಗಾದಲ್ಲಿ ವಿಚಾರಿಸಿದೆ. ಯಾರೋ ಹೆಂಗ್ಸು ಮಗೂನ ಕರ್ಕೊಂಡು ಬಂದು ಆಟ ಆಡಿಸ್ಕಂಡು ಕುಂತಿದ್ಲಂತೆ. ಹಾಲು ತರ್ತೀನಿ ಸ್ವಲ್ಪ ನೋಡ್ಕಳಿ ಅಂತ ಅಲ್ಲಿರೋ ಮೌಲಿ ಹತ್ರ ಹೇಳಿ ಹೋದೋಳು ಹಂಗೇ ಎಸ್ಕೇಪು. ಆಮೇಲೆ ಇವ್ನೇ ಕರ್ಕಬಂದು ಆ ಕೂಸ್ನ ಸ್ಟೇಷನ್‌ಗೆ ಬಿಟ್ಟೌನೆ. ಅಷ್ಟ್ ಮಾತ್ರ ನಿಜ... ಅಸ್ಗರನ ಫೋನ್ ನಂಬ್ರು ಇವ್ನಿಗೆ ಎಂಗ್ ಸಿಕ್ತು ಅನ್ನೋ ಕತೇನಾ ಇವ್ನ್ ಬಾಯ್ನಲ್ಲೇ ನೀವು ಕೇಳ್ಬೇಕಂದ್ರೆ ನಂಗೆ ಹತ್ತು ನಿಮ್ಸು ಟೈಮ್ ಕೊಡಿ. ಹಂಗೇ ಕೇಳಿದ್ರೆ ಕರಪತ್ರ ಆ ಪತ್ರ ಈ ಪತ್ರ ಅಂತ ಓಳ್ ಬಿಡ್ತಾನೆ... ಈ ನನ್ಮಗನಿಗೆ ಕೇಳೋ ರೀತೀಲೇ ಕೇಳಿದ್ರೆ ಮಾತ್ರ ಸರಿಹೋಯ್ತದೆ...' ಉಸ್ಮಾನನ್ನ ದಿಟ್ಟಿಸುತ್ತಾ ತೋಳ್ಪಟ್ಟಿ ಸರಿಪಡಿಸಿಕೊಂಡ ಪ್ರೊಬೇಷನರಿ.